# ಕರ್ನಾಟಕ ವಿಧಾನ ಪರಿಷತ್ತು

**1.ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1156(1273)**
**2. ವಿಧಾನಸಭೆಯ ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು)**
**3. ಉತ್ತರಿಸುವ ದಿನಾಂಕ : 22-08-2025**
**4. ಉತ್ತರಿಸುವ ಸಚಿವರು : ಮಾನ್ಯ ಕಾರ್ಮಿಕ ಸಚಿವರು**

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>(ಅ)</td><td>ಕಳೆದ 5 ವರ್ಷಗಳಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಎಷ್ಟು ಬಾಲಕಾರ್ಮಿಕರ ಪ್ರಕರಣಗಳು ಕಂಡುಬಂದಿವೆ; ಹಾಗೂ ತಪಾಸಣೆ ಮಾಡುವ ಜವಾಬ್ದಾರಿಯನ್ನು ಯಾವ ಅಧಿಕಾರಿಗೆ ವಹಿಸಲಾಗಿದೆ;</td><td>ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿ ಕಳೆದ 5 ವರ್ಷಗಳಲ್ಲಿ ನಡೆಸಲಾದ ಬಾಲ ಹಾಗೂ ಕಿಶೋರ ಕಾರ್ಮಿಕರ ತಪಾಸಣೆಗಳ ವಿವರಗಳು ಈ ಕೆಳಕಂಡಂತಿರುತ್ತವೆ;
<table>
<tr><th>ಕ್ರಸಂ</th><th>ವರ್ಷ</th><th>ತಪಾಸಣೆಗಳ ಸಂಖ್ಯೆ</th><th>ರಕ್ಷಿಸಲಾದ ಬಾಲಕಾರ್ಮಿಕರ ಸಂಖ್ಯೆ</th><th>ಪತ್ತೆಯಾದ ಪ್ರಕರಣಗಳ ಸಂಖ್ಯೆ</th></tr>
<tr><td>1.</td><td>2020</td><td>6757</td><td>172</td><td>107</td></tr>
<tr><td>2.</td><td>2021</td><td>43937</td><td>315</td><td>158</td></tr>
<tr><td>3.</td><td>2022</td><td>23109</td><td>581</td><td>200</td></tr>
<tr><td>4.</td><td>2023</td><td>39001</td><td>707</td><td>414</td></tr>
<tr><td>5.</td><td>2024</td><td>41652</td><td>781</td><td>556</td></tr>
<tr><td>6.</td><td>2025 (June)</td><td>17771</td><td>278</td><td>164</td></tr>
<tr><td colspan="2">ಒಟ್ಟು</td><td>172227</td><td>2834</td><td>1599</td></tr>
</table>
ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಕಲಂ 16 ಹಾಗೂ ಕಲಂ 17ರಡಿ ಸರ್ಕಾರದ 11 ಇಲಾಖೆಗಳ ಅಧಿಕಾರಿಗಳನ್ನು ನಿರೀಕ್ಷಕರುಗಳನ್ನಾಗಿ ನೇಮಿಸಲಾಗಿದೆ. ಅಧಿಸೂಚಿಸಲ್ಪಟ್ಟ ಅಧಿಕಾರಿಗಳ ತಂಡಗಳನ್ನು ರಚಿಸಿ ಪ್ರತಿಯೊಂದು ತಂಡವೂ ಮಾಸಿಕ ಕನಿಷ್ಠ 15 ತಪಾಸಣೆಗಳನ್ನು ಕೈಗೊಳ್ಳಲು ನಿರ್ದೇಶನ ನೀಡಲಾಗಿದೆ(ಪ್ರತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ) ಹಾಗೂ ಜಿಲ್ಲಾ ದಂಡಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾರ್ಯಪಡೆ (Task Force) ಯನ್ನು ರಚಿಸಲಾಗಿರುತ್ತದೆ(ಪ್ರತಿಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ). ಅದರನ್ವಯ ಅಧಿಕಾರಿಗಳ/ನಿರೀಕ್ಷಕರುಗಳ ಮೂಲಕ ದೂರು ಆಧಾರಿತ ಹಾಗೂ ಸ್ವಯಂ ಆಗಿ ತಪಾಸಣೆಗಳು / ದಾಳಿಗಳನ್ನು ನಡೆಸಲಾಗುತ್ತಿದೆ.</td></tr>
<tr><td>(ಆ)</td><td>ಕಾರ್ಮಿಕ ಇಲಾಖೆ ಅಧಿಕೃತ ಅಂಕಿ-ಅಂಶಗಳ ಪ್ರಕಾರ 2022 ರಿಂದ 2025 ರವರೆಗೆ ಬಾಲ ಕಾರ್ಮಿಕತೆ ಪ್ರಮಾಣದಲ್ಲಿ ನಿರಂತರ ಏರಿಕೆ ಕಂಡು ಬಂದಿರುವುದು ನಿಜವೇ;</td><td>ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿ 2022 ರಿಂದ 2025ರವರೆಗೆ ಬಾಲ ಹಾಗೂ ಕಿಶೋರ ಕಾರ್ಮಿಕರ ಪ್ರಮಾಣದಲ್ಲಿ ಏರಿಕೆಯಾಗಿರುವುದು ಕಂಡು ಬಂದಿರುತ್ತದೆ.</td></tr>
</table>

<table>
<tr>
<td>(ಇ)</td>
<td>ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳಲ್ಲಿ ಎಷ್ಟು ದಂಡ ವಸೂಲಿಯಾಗಿದೆ; ಎಷ್ಟು ಜನರಿಗೆ ಶಿಕ್ಷೆಯಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿ ಕಳೆದ ಮೂರು ವರ್ಷ(2023 ರಿಂದ ಜೂನ್–2025)ಗಳಲ್ಲಿ 651 ಮೊಕದ್ದಮೆಗಳನ್ನು ಸಕ್ಷಮ ನ್ಯಾಯಾಲಯಗಳಲ್ಲಿ ದಾಖಲಿಸಲಾಗಿದ್ದು, ಸದರಿ ನ್ಯಾಯಾಲಯಗಳಲ್ಲಿ 3 ವರ್ಷಗಳಲ್ಲಿ 50 ಪ್ರಕರಣಗಳು ವಿಲೇವಾರಿಯಾಗಿದ್ದು, ರೂ.31,91,750/–ಗಳ ದಂಡ ವಸೂಲಾತಿಯಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–3 ರಲ್ಲಿ ಒದಗಿಸಿದೆ.</td>
</tr>
<tr>
<td>(ಈ)</td>
<td>ಬಾಲ ಕಾರ್ಮಿಕ ಪದ್ಧತಿಯಿಂದ ಎಷ್ಟು ಮಕ್ಕಳನ್ನು ರಕ್ಷಣೆ ಮಾಡಲಾಗಿದೆ; ಈ ಬಗ್ಗೆ ಜಾಗೃತಿ ಮೂಡಿಸಲು ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ; ಇದಕ್ಕಾಗಿ ಕಳೆದ 05 ವರ್ಷಗಳಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ.</td>
<td>ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿ ಕಳೆದ ಮೂರು ವರ್ಷ(2023 ರಿಂದ ಜೂನ್–2025)ಗಳಲ್ಲಿ 1766 ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ರಕ್ಷಣೆ ಮಾಡಲಾಗಿದ್ದು, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಸರ್ಕಾರವು ಕೈಗೊಂಡ ಪ್ರಮುಖ ಕಾರ್ಯಕ್ರಮಗಳು ಈ ಕೆಳಕಂಡಂತಿರುತ್ತವೆ;
<ul>
<li>ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಗಳನ್ನು ಸ್ಥಾಪಿಸಲಾಗಿದೆ ಹಾಗೂ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ನಿಯಮಗಳು(ಕರ್ನಾಟಕ) ಹಾಗೂ ಎಸ್.ಓ.ಪಿ ಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಗುತ್ತಿದೆ.</li>
<li>ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯ ನಿರ್ಮೂಲನೆ ಕುರಿತು ವ್ಯಾಪಕವಾದ ಜಾಗೃತಿ ಮೂಡಿಸಲು ಗೋಡೆ ಬರಹಗಳು, ಕರಪತ್ರಗಳು, ಆಟೋ ಪ್ರಚಾರಗಳು, ತರಬೇತಿ ಕಾರ್ಯಾಗಾರಗಳು, ಬಿತ್ತಿ ಪತ್ರಗಳು, ಬೀದಿನಾಟಕಗಳು ಹಾಗೂ ಕಾನೂನು ಅರಿವು–ನೆರವು ಕಾರ್ಯಕ್ರಮಗಳ ಮೂಲಕ ನಿರಂತರ ಆಯೋಜನೆ ಕಾರ್ಯವನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಸಲಾಗುತ್ತಿದೆ.</li>
</ul>
ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಕಳೆದ 5 ವರ್ಷಗಳಲ್ಲಿ ವೆಚ್ಚ ಮಾಡಲಾದ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತವೆ;
<table>
<tr><th>ಕ್ರಸಂ</th><th>ವರ್ಷ</th><th>ವೆಚ್ಚ ಮಾಡಲಾದ ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>1.</td><td>2020–21</td><td>277.88</td></tr>
<tr><td>2.</td><td>2021–22</td><td>680.23</td></tr>
<tr><td>3.</td><td>2022–23</td><td>399.29</td></tr>
<tr><td>4.</td><td>2023–24</td><td>438.32</td></tr>
<tr><td>5.</td><td>2024–25</td><td>383.41</td></tr>
<tr><td>6.</td><td>2025 (ಜುಲೈ)</td><td>164.08</td></tr>
</table>
</td>
</tr>
</table>

ಸಂಖ್ಯೆ: ಕಾಇ 66 ಸಿಎಲ್ ಸಿ 2025

**(ಸಂತೋಷ್ ಎಸ್ ಲಾಡ್)**
ಕಾರ್ಮಿಕ ಸಚಿವರು

ಅನುಬಂಧ -1



**ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ**

ಕಾರ್ಮಿಕ ಆಯುಕ್ತರವರ ಕಛೇರಿ,
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-560029, ದಿನಾಂಕ: 17-08-2017

ಸಂಖ್ಯೆ: ಜಂಕಾಇ/ಸಿಎಲ್/ಸಿಆರ್-16/2017-18

## :: ಕಛೇರಿ ಆದೇಶ ::

**ವಿಷಯ:** ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರನ್ನು ಪತ್ತೆಹಚ್ಚಿ ಪುನರ್ ವಸತಿ ಕಲ್ಪಿಸುವ ಸಲುವಾಗಿ ತಪಾಸಣೆ ಮಾಡಲು ಮಾಸಿಕ ಗುರಿ ನಿಗಧಿಪಡಿಸುವ ಕುರಿತು.

**ಉಲ್ಲೇಖ:** 1. ಸರ್ಕಾರದ ಪತ್ರ ಸಂಖ್ಯೆ: ಕಾಇ 316 ಎಲ್ಇಟಿ 2010(1), ದಿನಾಂಕ:30.11.2010
3. ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು, ಇವರ ಕಛೇರಿ ಪತ್ರ ಸಂಖ್ಯೆ: ಕಾಇ 47 ಸ್ಪೀಮರ 2017, ದಿನಾಂಕ:11.08.2017

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1ರಲ್ಲಿ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 (ಕೇಂದ್ರ ಕಾಯ್ದೆ 61-1986) ಕಲಂ 17ರ ಅಡಿಯಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಮತ್ತು ಸರ್ಕಾರದ ಇತರೆ ಇಲಾಖೆಯ ಅಧಿಕಾರಿಗಳನ್ನು "ನಿರೀಕ್ಷಕರನ್ನಾಗಿ" ನೇಮಕ ಮಾಡಿ ಸರ್ಕಾರ ಅಧಿಸೂಚನೆ ಹೊರಡಿಸಿರುತ್ತದೆ [ಪ್ರತಿ ಲಗತ್ತಿಸಿದೆ].

ಉಲ್ಲೇಖ-2 ರಲ್ಲಿ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರನ್ನು ಪತ್ತೆಹಚ್ಚಿ ಪುನರ್ವಸತಿ ಕಲ್ಪಿಸುವ ಸಲುವಾಗಿ ತಪಾಸಣೆ ಮಾಡಲು ಮಾಸಿಕ ಗುರಿ ನಿಗಧಿಪಡಿಸುವಂತೆ ಹಾಗೂ ಸಾಧನೆಗಳ ವರದಿಯನ್ನು ಪಡೆಯುವಂತೆ ಸೂಚಿಸಿರುವ ಹಿನ್ನಲೆಯಲ್ಲಿ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 (ಕೇಂದ್ರ ಕಾಯ್ದೆ 61-1986) ರ ಕಲಂ 16 ಹಾಗೂ 17ರ ಅಡಿಯಲ್ಲಿ ನಿರೀಕ್ಷಕರಾಗಿ ಅಧಿಸೂಚಿಸಲ್ಪಟ್ಟ ಅಧಿಕಾರಿಗಳ ಹೋಬಳಿವಾರು ತಂಡವನ್ನು ರಚಿಸಿ (ತಂಡಗಳ ಮಾದರಿ ನಮೂನೆಯನ್ನು ಲಗತ್ತಿಸಿದೆ.) ಪ್ರತಿಯೊಂದು ತಂಡವೂ ಮಾಸಿಕ ಕನಿಷ್ಠ 15 ತಪಾಸಣೆಗಳನ್ನು ಕೈಗೊಳ್ಳುವಂತೆ ಕ್ರಮವಹಿಸಲು ತಮ್ಮನ್ನು ಕೋರಲಾಗಿದೆ. ತಂಡಗಳ ಮುಖ್ಯಸ್ಥರು ಪ್ರತಿ ತಿಂಗಳ ಅಂತ್ಯಕ್ಕೆ ತಪಾಸಣೆಗಳನ್ನು ಕೈಗೊಂಡ ಬಗ್ಗೆ ವರದಿಯನ್ನು ಅಧ್ಯಕ್ಷರು, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿಗೆ ನಿಗದಿತ ನಮೂನೆಯಲ್ಲಿ ಸಲ್ಲಿಸುವುದು ಹಾಗೂ ಜಿಲ್ಲಾಧಿಕಾರಿಗಳು/ಸದಸ್ಯ ಕಾರ್ಯದರ್ಶಿಗಳು ಕ್ರೋಢೀಕೃತ ವರದಿಯನ್ನು ಪ್ರತಿ ತಿಂಗಳ 2ನೇ ತಾರೀಖಿನೊಳಗಾಗಿ ಈ ಕಛೇರಿಗೆ ಸಲ್ಲಿಸುವಂತೆ ಈ ಮೂಲಕ ಸೂಚಿಸಿದೆ. ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ [ನಿಷೇಧ ಮತ್ತು ನಿಯಂತ್ರಣ] ಕಾಯ್ದೆ, 1986 ರಡಿ ತನಿಖೆ ನಡೆಸಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ನಿಮಗೆ ರವಾನಿಸಲಾಗಿದೆ.

(ಆರ್. ಆರ್. ಜನ್ನು)
ಕಾರ್ಮಿಕ ಆಯುಕ್ತರು

ಇವರಿಗೆ:-

1. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಬೆಂಗಳೂರು ನಗರ ಜಿಲ್ಲೆ

ಅನುಬಂಧ-2

## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಸಂಬಂಧ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆ (Task Force) ಯನ್ನು ರಚಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಕಾಇ 52 ಸಿಎಲ್‌ಸಿ 2017, ದಿನಾಂಕ:11/02/2021.
2. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಕಾಇ 52 ಸಿಎಲ್‌ಸಿ 2017, ದಿನಾಂಕ:16/04/2021.
3. ದಿನಾಂಕ:01/06/2023 ರಂದು ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.
4. ಸರ್ಕಾರದ ಪತ್ರ ಸಂಖ್ಯೆ:ಕಾಇ 12 ಸಿಎಲ್‌ಸಿ 2023, ದಿನಾಂಕ:13/06/2023.
5. ಸರ್ಕಾರದ ಆದೇಶ ಸಂಖ್ಯೆ:ಕಾಇ 19 ಸಿಎಲ್‌ಸಿ 2017, ದಿನಾಂಕ:27.06.2022
6. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ ಇವರ ಪತ್ರ ಸಂಖ್ಯೆ: ಕೆಎಸ್‌ಸಿಎಲ್‌ಇಪಿಎಸ್/ಸಿಎಲ್-05/ಸಿಆರ್-14/2023-24 ದಿನಾಂಕ: 03/07/2023 ಹಾಗೂ 26/07/2023.
7. ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ)ಕಾಯ್ದೆ, 1986.
8. ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ನಿಯಮಗಳು (ಕೇಂದ್ರ/ ಕರ್ನಾಟಕ) ಗಳ ಅನುಷ್ಠಾನ.

* * * * *

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ (1) ರ ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರದ ಅನುದಾನದಿಂದ ಈಗಾಗಲೇ ಬೀದರ್, ಚಾಮರಾಜನಗರ, ಚಿಕ್ಕಮಗಳೂರು, ಗದಗ, ಹಾಸನ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಉಡುಪಿ, ರಾಮನಗರ, ಯಾದಗಿರಿ. ಚಿಕ್ಕಬಳ್ಳಾಪುರ ಹಾಗೂ ಕೊಡಗು ಈ 13 ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ರಾಜ್ಯ ಬಾಲಕಾರ್ಮಿಕ ಯೋಜನೆ (ಎಸ್.ಸಿ.ಎಲ್.ಪಿ)ಯ ಮಾದರಿಯಲ್ಲಿ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ(ಎನ್.ಸಿ.ಎಲ್.ಪಿ) ಜಾರಿಯಲ್ಲಿರುವ ತುಮಕೂರು, ಮಂಡ್ಯ, ಬೆಂಗಳೂರು ನಗರ, ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ಧಾರವಾಡ, ಹಾವೇರಿ, ಕಲಬುರಗಿ, ಕೋಲಾರ, ದಾವಣಗೆರೆ, ಮತ್ತು ಕೊಪ್ಪಳ ಈ ಜಿಲ್ಲೆಗಳಲ್ಲಿ ರಾಜ್ಯ ಬಾಲಕಾರ್ಮಿಕ ಯೋಜನೆ(ಎಸ್.ಸಿ.ಎಲ್.ಪಿ)ಯ ಮಾರ್ಗಸೂಚಿ ಗಳಾನುಸಾರ ಒಟ್ಟು 25 ಜಿಲ್ಲೆಗಳಲ್ಲಿ ಏಕಸ್ವರೂಪದ ಯೋಜನೆಯನ್ನು ಜಾರಿಗೊಳಿಸಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ (2) ರಲ್ಲಿ ಈಗಾಗಲೇ ರಾಜ್ಯ ಬಾಲಕಾರ್ಮಿಕ ಯೋಜನೆಯು ಜಾರಿಯಲ್ಲಿರುವ 25 ಜಿಲ್ಲೆಗಳ ಜೊತೆಗೆ ಮೈಸೂರು, ಬೆಳಗಾವಿ ಹಾಗೂ ನೂತನ ಜಿಲ್ಲೆ ವಿಜಯನಗರ ಜಿಲ್ಲೆಗಳನ್ನು ಸೇರ್ಪಡೆಗೊಳಿಸಿ ಒಟ್ಟು 28 ಜಿಲ್ಲೆಗಳನ್ನು ಏಕಸ್ವರೂಪದ

....2

ಮಾದರಿಯಲ್ಲಿ ರಾಜ್ಯ ಬಾಲಕಾರ್ಮಿಕ ಯೋಜನೆಯನ್ನು ಜಾರಿಗೊಳಿಸಲು ತಿದ್ದುಪಡಿ ಆದೇಶ
ಆದೇಶ ಮಾಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ (3) ರಲ್ಲಿ ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ
ದಿನಾಂಕ: 01/06/2023 ರಂದು ನಡೆದ ಇಲಾಖಾ ಪರಿಶೀಲನಾ ಸಭೆಯಲ್ಲಿ ಬಾಲಕಾರ್ಮಿಕ
ನಿರ್ಮೂಲನಾ ಸಂಬಂಧ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್
ಪೋರ್ಸ್ (Task Force) ಸಮಿತಿಯನ್ನು ರಚಿಸುವಂತೆ ಮಾನ್ಯ ಇಲಾಖಾ ಸಚಿವರು
ಮೌಖಿಕವಾಗಿ ಸೂಚಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ (4) ರಲ್ಲಿ ಸರ್ಕಾರದ ಪತ್ರದಲ್ಲಿ ದಿನಾಂಕ: 01/06/2023 ರ
ಸಭೆಯಲ್ಲಿ ಮಾನ್ಯ ಇಲಾಖಾ ಕಾರ್ಮಿಕ ಸಚಿವರು ಸೂಚಿಸಿದಂತೆ ರಾಜ್ಯದ ಎಲ್ಲಾ ಜಿಲ್ಲಾ
ಮತ್ತು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಪೋರ್ಸ್ (Task Force) ಸಮಿತಿಯನ್ನು ರಚಿಸುವ ಕುರಿತು
ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕಾರ್ಮಿಕ ಆಯುಕ್ತರನ್ನು
ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ (5) ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಾಇ 52 ಸಿಎಲ್‌ಸಿ 2017
ದಿನಾಂಕ:11/02/2021 ಮತ್ತು ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಕಾಇ 52 ಸಿಎಲ್ 2017,
ಬೆಂಗಳೂರು, ದಿನಾಂಕ:16/04/2021 ರಂತೆ ರಾಜ್ಯದಲ್ಲಿ ಈಗಾಗಲೇ ರಾಜ್ಯ ಬಾಲಕಾರ್ಮಿಕ
ಯೋಜನೆಯು ಜಾರಿಯಲ್ಲಿರುವ 28 ಜಿಲ್ಲೆಗಳ ಜೊತೆಗೆ ಬೆಂಗಳೂರು ಗ್ರಾಮಾಂತರ,
ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳನ್ನು ಸೇರ್ಪಡೆಗೊಳಿಸಿ ಒಟ್ಟು 31 ಜಿಲ್ಲೆಗಳನ್ನು
ಏಕಸ್ವರೂಪದ ಮಾದರಿಯಲ್ಲಿ ರಾಜ್ಯ ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದೆ.

ಮೇಲ ಓದಲಾದ ಕ್ರ.ಸಂ (6) ರಲ್ಲಿ ಕಾರ್ಮಿಕ ಆಯುಕ್ತರು, ಬಾಲ ಹಾಗೂ ಕಿಶೋರ
ಕಾರ್ಮಿಕ ಪದ್ಧತಿ ನಿರ್ಮೂಲನಾ ಸಂಬಂಧ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು
ಮಟ್ಟದಲ್ಲಿ ಟಾಸ್ಕ್ ಪೋರ್ಸ್ (Task Force) ಸಮಿತಿಯನ್ನು ರಚಿಸುವ ಸಂಬಂಧ
ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅನಂತರ ದಿನಾಂಕ: 26/07/2023 ರ ಪತ್ರದಲ್ಲಿ ಈ ಸಂಬಂಧ
ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆ (Task Force)ಯನ್ನು ರಚಿಸುವ
ಸಂಬಂಧ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ (7) ರಲ್ಲಿ ಕೇಂದ್ರ ಸರ್ಕಾರವು ಬಾಲ ಹಾಗೂ ಕಿಶೋರ
ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಬಾಲಕಾರ್ಮಿಕ ಹಾಗೂ
ಕಿಶೋರ ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ)ಕಾಯ್ದೆ,1986ನ್ನು ಜಾರಿಗೆ ತಂದಿರುತ್ತದೆ.

ಮೇಲೆ ಓದಲಾದ ಕ್ರ.ಸಂ (8) ರಲ್ಲಿ ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ
ಕಾರ್ಮಿಕ(ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986, ನಿಯಮಗಳು(ಕೇಂದ್ರ/ಕರ್ನಾಟಕ)ಗಳ
ಅನುಷ್ಠಾನ, ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಮುಕ್ತ ಜಿಲ್ಲೆಗಳ ಘೋಷಣೆ
ಹೊರಡಿಸಲು ಅವಶ್ಯವಿರುವ (MSOP) ಯ ಅನುಷ್ಠಾನ ಮಾಡುವುದು ಹಾಗೂ
ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪುನರ್ವಸತಿ ನಿಧಿಯನ್ನು ಎಲ್ಲಾ ಜಿಲ್ಲೆಗಳಲ್ಲಿ
ಸ್ಥಾಪಿಸಲಾಗಿದೆ. ರಾಜ್ಯ ಸರ್ಕಾರವು ಕರ್ನಾಟಕವನ್ನು ಬಾಲಕಾರ್ಮಿಕ ಹಾಗೂ ಕಿಶೋರ
ಕಾರ್ಮಿಕ ಮುಕ್ತ ರಾಜ್ಯವನ್ನಾಗಿಸಲು ರಾಜ್ಯ ಬಾಲಕಾರ್ಮಿಕ ಯೋಜನೆ (ಎಸ್.ಸಿ.ಎಲ್.ಪಿ)
ಯನ್ನು ಜಾರಿಗೆ ತಂದಿರುತ್ತದೆ. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ

ಬಾಲಕಾರ್ಮಿಕ ಯೋಜನಾ ಸೊಸೈಟಿಗಳನ್ನು ಸ್ಥಾಪಿಸಿ, ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 12 ಸಿಎಲ್‌ಸಿ 2023,**
**ಬೆಂಗಳೂರು, ದಿನಾಂಕ: 20/09/2023**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡಲು ಹಾಗೂ ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರನ್ನು ತಪಾಸಣೆ ಮಾಡಲು, ಕನಿಷ್ಠ ಮಾಸಿಕ ತಪಾಸಣೆಗಳ ಗುರಿ ನಿಗಧಿಪಡಿಸಿ ದಾಳಿ/ತಪಾಸಣೆ ಮಾಡುವುದು ಹಾಗೂ ಪುನರ್ವಸತಿಗೊಳಿಸಿ ಕಾಲ-ಕಾಲಕ್ಕೆ ವರದಿ ಸಲ್ಲಿಸುವ ಸಂಬಂಧ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆ (Task Force) ಯನ್ನು ಈ ಕೆಳಕಂಡಂತೆ ರಚಿಸಲಾಗಿದೆ.

**ಜಿಲ್ಲಾ ಮಟ್ಟದ ಕಾರ್ಯಪಡೆ (Task Force)**

| ಕ್ರ.ಸಂ | ಇಲಾಖೆ | ಪದನಾಮ |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಪೊಲೀಸ್ ಇಲಾಖೆ | |
| 3 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | |
| 4 | ಸದಸ್ಯ ಕಾರ್ಯದರ್ಶಿಗಳು, ಕಾನೂನು ಸೇವಾ ಪ್ರಾಧಿಕಾರ | |
| 5 | ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕೆ ಮತ್ತು ವಾಣಿಜ್ಯ | |
| 6 | ಜಂಟಿ ನಿರ್ದೇಶಕರು, ಕೃಷಿ ಇಲಾಖೆ | |
| 7 | ಉಪ ನಿರ್ದೇಶಕರು, ರೇಷ್ಮೆ ಇಲಾಖೆ | |
| 8 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | |
| 9 | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | |
| 10 | ಉಪ ನಿರ್ದೇಶಕರು / ಕಾರ್ಖಾನೆಗಳ ಸಹಾಯಕರು, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ | |
| 11 | ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ (PWD) | |
| 12 | ಎಕ್ಸಿಕ್ಯೂಟಿವ್ ಇಂಜಿನಿಯರ್, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (KPTCL) | |
| 13 | ಜಿಲ್ಲೆಗೆ ಸಂಬಂಧಪಟ್ಟ ನಗರ, ಸ್ಥಳೀಯ ಸಂಸ್ಥೆಯ ಆಯುಕ್ತರು/ಮುಖ್ಯಾಧಿಕಾರಿ ಪ್ರಧಾನ ಕಛೇರಿ/ಮುನ್ಸಿಪಾಲಿಟಿ | |
| 14 | ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | |
| 15 | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ | |
| 16 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಆರೋಗ್ಯ ಇಲಾಖೆ | |
| 17 | ಜಿಲ್ಲಾ ಪ್ರಚಾರ ಮತ್ತು ಮಾಹಿತಿ ಅಧಿಕಾರಿಗಳು, ವಾರ್ತಾ ಇಲಾಖೆ | |
| 18 | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ | |

| | | |
|---|---|---|
| 19 | ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎರಡು ಸ್ವಯಂ ಸೇವಾ ಸಂಸ್ಥೆಗಳು | |
| 20 | ಯೋಜನಾ ನಿರ್ದೇಶಕರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಕಾರ್ಮಿಕ ಇಲಾಖೆ | |
| 21 | ಸಹಾಯಕ ಕಾರ್ಮಿಕ ಆಯುಕ್ತರು/ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಇಲಾಖೆ | ಸದಸ್ಯ ಕಾರ್ಯದರ್ಶಿ |

**ತಾಲ್ಲೂಕು ಮಟ್ಟದ ಕಾರ್ಯಪಡೆ (Task Force)**

| ಕ್ರ.ಸಂ. | ಹುದ್ದೆ | ಕಾರ್ಯಪಡೆಯಲ್ಲಿ ಹುದ್ದೆ |
|---|---|---|
| 1 | ತಹಶೀಲ್ದಾರ್ | ಅಧ್ಯಕ್ಷರು |
| 2 | ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯರು |
| 3 | ಕ್ಷೇತ್ರ ಶಿಕ್ಷಣ ಅಧಿಕಾರಿಗಳು/ಸರ್ವಶಿಕ್ಷಣ ಅಭಿಯಾನದ ಅಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ | |
| 4 | ಪೌರಾಯುಕ್ತರು/ಮುಖ್ಯಾಧಿಕಾರಿಗಳು, ನಗರ ಸಭೆ, ಪುರ ಸಭೆ ಮತ್ತು ಪಟ್ಟಣ ಪಂಚಾಯಿತಿ | |
| 5 | ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳು | |
| 6 | ವಿಸ್ತರಣಾಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ | |
| 7 | ರೇಷ್ಮೆ ಕೃಷಿ ವಿಸ್ತರಣಾ ಅಧಿಕಾರಿ/ಸಹಾಯಕ ನಿರ್ದೇಶಕರು. ರೇಷ್ಮೆ ಇಲಾಖೆ | |
| 8 | ಕೃಷಿ ಅಧಿಕಾರಿಗಳು, ಕೃಷಿ ಇಲಾಖೆ | |
| 9 | ತಾಲ್ಲೂಕು ಆರೋಗ್ಯ ಅಧಿಕಾರಿಗಳು, ಆರೋಗ್ಯ ಇಲಾಖೆ | |
| 10 | ಎಲ್ಲಾ ಪೊಲೀಸ್ ಠಾಣೆಗಳ ಅಧಿಕಾರಿಗಳು/ಪೊಲೀಸ್ ವೃತ್ತ ನಿರೀಕ್ಷಕರುಗಳು, ಪೊಲೀಸ್ ಇಲಾಖೆ | |
| 11 | ಯೋಜನಾ ನಿರ್ದೇಶಕರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಕಾರ್ಮಿಕ ಇಲಾಖೆ | |
| 12 | ಮಕ್ಕಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ /ಸ್ವಯಂ ಸೇವಕರು | |
| 13 | ಹಿರಿಯ ಕಾರ್ಮಿಕ ನಿರೀಕ್ಷಕರು (SLI) / ಕಾರ್ಮಿಕ ನಿರೀಕ್ಷಕರು (LI) ಕಾರ್ಮಿಕ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಮೇಲ್ಕಂಡ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಕಾರ್ಯಪಡೆ (Task Force) ಗಳು ಈ ಕೆಳಕಂಡ ಸೂಚನೆಗಳನ್ನು ಪಾಲಿಸತಕ್ಕದ್ದು:**

1. ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳು ಜಿಲ್ಲೆಗಳಲ್ಲಿ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.
2. ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರನ್ನು ತಪಾಸಣೆ ಮಾಡಲು ಕನಿಷ್ಠ ಮಾಸಿಕ ತಪಾಸಣೆಗಳ ಗುರಿ ನಿಗದಿಪಡಿಸಿ ದಾಳಿ/ತಪಾಸಣೆ ಮಾಡುವುದು ಹಾಗೂ ಪುನರ್ವಸತಿಗೊಳಿ ಕಾಲ-ಕಾಲಕ್ಕೆ ವರದಿ ಸಲ್ಲಿಸುವುದು.

....5

3. ಸಮಿತಿಯು ಕೇಂದ್ರ / ರಾಜ್ಯ ಸರ್ಕಾರ ಕಲ್ಪಿಸಲಾದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತದೆ.
4. ಸಮಿತಿಯ ನಾಮನಿರ್ದೇಶಿತ ಸದಸ್ಯರು ಸ್ವಯಂಸೇವೆ ಆಧಾರದ ಮೇಲೆ ಕಾರ್ಯನಿರ್ವಹಿಸಬೇಕು ಮತ್ತು ಯಾವುದೇ ಸಿಟ್ಟಿಂಗ್ ಶುಲ್ಕ ಅಥವಾ TA, DA ಪಾವತಿಸಲಾಗುವುದಿಲ್ಲ.
5. ಸಭೆಯ ಮೇಲ್ವಿಚಾರಣೆಯನ್ನು ನಡೆಸಿ, ವರದಿಯನ್ನು ಪ್ರತಿ ತಿಂಗಳು ಉಪ ಕಾರ್ಮಿಕ ಆಯುಕ್ತರು ದೃಢೀಕರಿಸಿ ಕೇಂದ್ರ ಕಛೇರಿಯ ಪ್ರಚಾರ ಮತ್ತು ಅಂಕಿ ಅಂಶ ಶಾಖೆಗೆ ಸಲ್ಲಿಸುವುದು ಹಾಗೂ ಕಾರ್ಮಿಕ ಆಯುಕ್ತರ ಗಮನಕ್ಕೆ ತರುವುದು.
6. ಕನಿಷ್ಠ 3 ತಿಂಗಳಿಗೊಮ್ಮೆ ಕಾರ್ಯಪಡೆ (Task Force) ಸಭೆ ನಡೆಸುವುದು ಹಾಗೂ ಸಭೆಯ ನಡವಳಿಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ತ್ರಿವೇಣಿ ಬಿ.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಲೆಕ್ಕ ಪತ್ರ ಮತ್ತು ಲೆಕ್ಕ ಪರಿಶೋಧನೆ (VLC-3) ಕರ್ನಾಟಕ, ಬೆಂಗಳೂರು.
2. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಐಟಿಐ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
3. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು-01.
4. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಸ್ಟೇಟ್ ಚೈಲ್ಡ್ ಲೇಬರ್ ಎರಾಡಿಕೇಶನ್ ಪ್ರಾಜೆಕ್ಟ್ ಸೊಸೈಟಿ, ಕಾರ್ಮಿಕ ಭವನ, ಐಟಿಐ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
5. ಕರ್ನಾಟಕ ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -3)/(ವೆಚ್ಚ-9) ವಿಧಾನಸೌಧ, ಬೆಂಗಳೂರು -01
7. ಆಂತರಿಕ ಆರ್ಥಿಕ ಸಲಹೆಗಾರರು, ಕಾರ್ಮಿಕ ಇಲಾಖೆ,ವಿಕಾಸಸೌಧ, ಬೆಂಗಳೂರು– 01.
8. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು-01.
10. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು-01.
11. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

******

ಅನುಬಂಧ-3

## ಬಾಲ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿ ಕಳೆದ ಮೂರು ವರ್ಷ(2023 ರಿಂದ ಜೂನ್-2025)ಗಳಲ್ಲಿ ರಕ್ಷಿಸಲಾದ, ದಾಖಲಿಸಲಾದ ಪ್ರಕರಣಗಳು ಹಾಗೂ ವಸೂಲಾತಿಯಾದ ದಂಡದ ಜಿಲ್ಲಾವಾರು ವಿವರಗಳು

| ಕ್ರಸಂ | ಜಿಲ್ಲೆಯ ಹೆಸರು | ತಪಾಸಣೆಗಳ ಸಂಖ್ಯೆ | ರಕ್ಷಿಸಲಾದ ಬಾಲಕಾರ್ಮಿಕರ ಸಂಖ್ಯೆ | ಪತ್ತೆಯಾದ ಪ್ರಕರಣಗಳ ಸಂಖ್ಯೆ | ಸಕ್ಷಮ ನ್ಯಾಯಾಲಯಗಳಲ್ಲಿ ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ | ನ್ಯಾಯಾಲಯದಿಂದ ಶಿಕ್ಷೆಯಾದ ಪ್ರಕರಣಗಳ ಸಂಖ್ಯೆ | ವಸೂಲಾದ ದಂಡ | ಶಿಕ್ಷೆಯ ಪ್ರಮಾಣ |
|---|---|---|---|---|---|---|---|---|
| 1. | ಬೆಂಗಳೂರು ಗ್ರಾಮಾಂತರ | 1257 | 86 | 53 | 9 | 1 | 42000 | – |
| 2. | ಬೆಂಗಳೂರು ನಗರ | 31475 | 88 | 123 | 57 | 8 | 226000 | – |
| 3. | ತುಮಕೂರು | 2948 | 39 | 17 | 21 | | | – |
| 4. | ಚಿಕ್ಕಬಳ್ಳಾಪುರ | 929 | 79 | 65 | 57 | 7 | 78000 | – |
| 5. | ಕೋಲಾರ | 2432 | 43 | 37 | 22 | 2 | 95000 | – |
| 6. | ಮೈಸೂರು | 3274 | 125 | 51 | 75 | 1 | 90000 | – |
| 7. | ಮಂಡ್ಯ | 3269 | 39 | 29 | 11 | 2 | 82000 | – |
| 8. | ಚಾಮರಾಜನಗರ | 1037 | 66 | 51 | 39 | | 64000 | – |
| 9. | ಮಂಗಳೂರು | 4239 | 26 | 14 | 9 | 1 | 61250 | – |
| 10. | ಉಡುಪಿ | 1948 | 17 | 22 | 10 | 5 | 249000 | – |
| 11. | ಶಿವಮೊಗ್ಗ | 3951 | 40 | 20 | 19 | | 500000 | – |
| 12. | ಚಿಕ್ಕಮಗಳೂರು | 3517 | 32 | 28 | 18 | 1 | 81000 | – |
| 13. | ಹಾಸನ | 4198 | 64 | 47 | 5 | 6 | 250000 | – |
| 14. | ಮಡಿಕೇರಿ | 1441 | 12 | 6 | 23 | 1 | 162000 | – |
| 15. | ಬೆಳಗಾವಿ | 1710 | 117 | 50 | 46 | | 107500 | – |
| 16. | ವಿಜಯಪುರ | 2488 | 40 | 15 | 10 | | 178000 | – |
| 17. | ಬಾಗಲಕೋಟೆ | 2290 | 57 | 36 | 21 | | | – |
| 18. | ದಾರವಾಡ | 2748 | 75 | 34 | 3 | | | – |
| 19. | ಗದಗ | 1199 | 18 | 6 | 4 | | 10000 | – |
| 20. | ಕಾರವಾರ | 5104 | 26 | 14 | 1 | | 21000 | – |
| 21. | ಹಾವೇರಿ | 1381 | 44 | 44 | | | | – |
| 22. | ದಾವಣಗೆರೆ | 935 | 43 | 40 | 9 | | | – |
| 23. | ಬಳ್ಳಾರಿ | 2151 | 82 | 44 | 40 | 3 | 10000 | -- |
| 24. | ಚಿತ್ರದುರ್ಗ | 1680 | 23 | 19 | 6 | | 45000 | – |
| 25. | ಕಲಬುರ್ಗಿ | 1893 | 90 | 18 | 14 | 5 | | – |
| 26. | ಬೀದರ್ | 962 | 36 | 36 | 22 | | | – |
| 27. | ರಾಯಚೂರು | 3279 | 107 | 75 | 28 | 4 | 660000 | – |
| 28. | ಕೊಪ್ಪಳ | 1010 | 88 | 6 | 4 | 2 | | – |
| 29. | ರಾಮನಗರ | 596 | 62 | 57 | 21 | 1 | 180000 | – |
| 30. | ಯಾದಗಿರಿ | 3083 | 102 | 86 | 47 | | | – |
| 31. | ವಿಜಯನಗರ | – | – | – | – | – | – | – |
| | ಒಟ್ಟು | 98424 | 1766 | 1143 | 651 | 50 | 3191750 | – |

ಆಯುಕ್ತರು
ಕಾರ್ಮಿಕ ಇಲಾಖೆ